ದಿನಾಂಕ 16-12-2017 ರಂದು ಮಧ್ಯಾಹ್ನ 3.00 ಗಂಟೆಗೆ ಕೊಠಡಿ ಸಂ. 252, ಬಹುಮಹಡಿ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 34ನೇ (ವಿಶೇಷ) ಸಭೆಯ ನಡುವಳಿಗಳು:

ಉಪಸ್ಥಿತರು:

| | | |
|---|---|---|
| 1. | ಡಾ. ಪಿ.ಎಂ. ಸಾಲಿಮಠ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು |
| 2. | ಶ್ರೀ ಎಂ. ಮಹೇಶ್ವರ ರಾವ್, ಭಾಆಸೇ., ಸರಕಾರದ ಕಾರ್ಯದರ್ಶಿ (ಕೃಷಿ ಇಲಾಖೆ) | ಸದಸ್ಯರು |
| 3. | ಶ್ರೀಮತಿ ಪದ್ಮಾವತಿ, ಹೆಚ್ಚುವರಿ ಕಾರ್ಯದರ್ಶಿ(ಆರ್ಥಿಕ ಇಲಾಖೆ) | ಸದಸ್ಯರು |
| 4. | ಶ್ರೀ ಅಮರೇಶ ಬಲ್ಲಿದವ (ಸರಕಾರದಿಂದ ನಾಮನಿರ್ದೇಶಿತ) | ಸದಸ್ಯರು |
| 5. | ಶ್ರೀ ಸಿದ್ದಪ್ಪ ಭಂಡಾರಿ (ಸರಕಾರದಿಂದ ನಾಮನಿರ್ದೇಶಿತ) | ಸದಸ್ಯರು |
| 6. | ಶ್ರೀ ವೀರನಗೌಡ ಪರಸರೆಡ್ಡಿ (ಸರಕಾರದಿಂದ ನಾಮನಿರ್ದೇಶಿತ) | ಸದಸ್ಯರು |
| 7. | ಡಾ. ಎಂ. ಶೇಖರಗೌಡ, (ಮಾನ್ಯ ಕುಲಾಧಿಪತಿಯವರಿಂದ ನಾಮನಿರ್ದೇಶಿತ) | ಸದಸ್ಯರು |
| 8. | ಡಾ. ಎಂ.ಬಿ. ಚೆಟ್ಟಿ, ಅಸಿಸ್ಟಂಟ್ ಡೈರೆಕ್ಟರ್ ಜನರಲ್ (ಹೆಚ್.ಆರ್.ಡಿ.), ಐಸಿಎಆರ್, ನವದೆಹಲಿ (ಐಸಿಎಆರ್ ನಿಂದ ನಾಮನಿರ್ದೇಶಿತ) | ಸದಸ್ಯರು |
| 9. | ಶ್ರೀ ಗುತ್ತಿ ಜಂಬುನಾಥ, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿಯವರು ಉಪಸ್ಥಿತರಿದ್ದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಮಾನ್ಯ ಸದಸ್ಯರನ್ನು ಸ್ವಾಗತಿಸಿ, ಕೋರಂ ಇದ್ದ ಪ್ರಯುಕ್ತ, ಸಭೆಯನ್ನು ಕಾರ್ಯಸೂಚಿ ಪ್ರಕಾರ ಆರಂಭಿಸಲು ಅಧ್ಯಕ್ಷರ ಅಪ್ಪಣೆ ಕೋರಿದರು.

ಅಧ್ಯಕ್ಷರು ಸದಸ್ಯ ಕಾರ್ಯದಶಿಯವರಿಗೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಮಂಡಿಸಲು ಸೂಚಿಸಿದರು. ತದನಂತರ, ವಿಷಯಗಳನ್ನು ಚರ್ಚಿಸಿ, ಈ ಕೆಳಗಿನಂತೆ ಠರಾಯಿಸಲಾಯಿತು:

<table>
<tr><td>ಐಟಂ-1</td><td>ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಪ್ರಾಧ್ಯಾಪಕರು, ಸಹ-ಪ್ರಾಧ್ಯಾಪಕರು ಮತ್ತು ಇತರೆ ತತ್ಸಮಾನ ಹುದ್ದೆಗಳಿಗೆ ನಡೆದ ನೇರ ನೇಮಕಾತಿಗೆ (ಇಂಟರ್-ಸೇ ಮೆರಿಟ್ ಆಧಾರಿತ) ಅನುಮೋದನೆ ನೀಡುವುದು.<br><br>ಕರ್ನಾಟಕ ಸರಕಾರದ ಆರ್ಥಿಕ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯವರು, ದಿನಾಂಕ 1-8-2016 ರ ಅಧಿಸೂಚನೆಯನ್ನು ಉಲ್ಲೇಖಿಸುತ್ತಾ, ಸದರಿ ಅಧಿಸೂಚನೆಯಲ್ಲಿ ಮಿಕ್ಕುಳಿದ ವೃಂದದ (ಸ್ಥಳೀಯೇತರರ) ಪ್ರಾಧ್ಯಾಪಕರ 10 ಹುದ್ದೆ, ಸಹ ಪ್ರಾಧ್ಯಾಪಕರ 13 ಹುದ್ದೆ ಹಾಗೂ ಒಂದೇ ಹುದ್ದೆ /ಇತರೇ ವರ್ಗದವರಿಗಾಗಿ ಇದ್ದಂತಹ ಸಹ ಪ್ರಾಧ್ಯಾಪಕರ 3 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ಪಡೆಯದಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು.<br><br>ಠರಾವು:<br><br>ಆರ್ಥಿಕ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯವರ ಮೇಲಿನ ಆಕ್ಷೇಪಣೆಯ ಹಿನ್ನೆಲೆಯಲ್ಲಿ, ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ಪಡೆದ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಪ್ರಾಧ್ಯಾಪಕರು, ಸಹ-ಪ್ರಾಧ್ಯಾಪಕರು ಮತ್ತು ಇತರೆ ತತ್ಸಮಾನ ಹುದ್ದೆಗಳಿಗೆ ನಡೆದ ನೇರ ನೇಮಕಾತಿಗೆ (ಇಂಟರ್-ಸೇ ಮೆರಿಟ್ ಆಧಾರಿತ) ಹುದ್ದೆಗಳನ್ನು ಭರ್ತಿ ಮಾಡುವ ಕುರಿತ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸಲಾಗುವುದೆಂದು ಮಂಡಳಿಯು ಠರಾಯಿಸಿತು.<br><br>ಮುಂದುವರೆದು, ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ಪಡೆಯದೇ ದಿನಾಂಕ 1-8-2016 ರ ಅಧಿಸೂಚನೆಯನ್ನು ಹೊರಡಿಸಿದ ಬಗ್ಗೆ ಸಂಬಂಧಿಸಿದವರಿಂದ ಸೂಕ್ತ ವಿವರಣೆಯನ್ನು ಪಡೆಯಬೇಕೆಂದೂ ಠರಾಯಿಸಲಾಯಿತು.<br><br>(ಕ್ರಮ: ಕುಲಸಚಿವರು)</td></tr>
</table>

| | |
|---|---|
| ಐಟಂ–2 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಖಾಲಿ ಇರುವ ಅಧಿಕಾರಿ ಹುದ್ದೆಗಳ ನೇಮಕಾತಿಯ ಆಯ್ಕೆ ಪಟ್ಟಿಯನ್ನು ಅನುಮೋದಿಸುವ ಕುರಿತು.<br><br>ಕರ್ನಾಟಕ ಸರಕಾರದ ಆರ್ಥಿಕ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯವರು, ದಿನಾಂಕ 11–4–2016 ರ ಅಧಿಸೂಚನೆಯನ್ನು ಉಲ್ಲೇಖಿಸುತ್ತಾ, ಸದರಿ ಅಧಿಸೂಚನೆಯಲ್ಲಿ ಮಿಕ್ಕುಳಿದ ವೃಂದದ (ಸ್ಥಳೀಯೇತರರ) ವಿಸ್ತರಣಾ ನಿರ್ದೇಶಕರು ಮತ್ತು ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ ಹಾಗೂ ಒಂದೇ ಹುದ್ದೆ /ಇತರೇ ವರ್ಗದವರಿಗಾಗಿ ಇದ್ದಂತಹ ಗ್ರಂಥಾಲಯಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ಪಡೆಯದಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು.<br><br>ಠರಾವು:<br><br>ಆರ್ಥಿಕ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯವರ ಮೇಲಿನ ಆಕ್ಷೇಪಣೆಯ ಹಿನ್ನೆಲೆಯಲ್ಲಿ, ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ಪಡೆದ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಖಾಲಿ ಇರುವ ಅಧಿಕಾರಿ ಹುದ್ದೆಗಳ ನೇಮಕಾತಿಯ ಕುರಿತ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸಲಾಗುವುದೆಂದು ಮಂಡಳಿಯು ಠರಾಯಿಸಿತು.<br><br>ಮುಂದುವರೆದು, ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ಪಡೆಯದೇ ದಿನಾಂಕ 11–4–2016 ರ ಅಧಿಸೂಚನೆಯನ್ನು ಹೊರಡಿಸಿದ ಬಗ್ಗೆ ಸಂಬಂಧಿಸಿದವರಿಂದ ಸೂಕ್ತ ವಿವರಣೆಯನ್ನು ಪಡೆಯಬೇಕೆಂದೂ ಠರಾಯಿಸಲಾಯಿತು.<br><br>(ಕ್ರಮ: ಕುಲಸಚಿವರು) |
| ಐಟಂ–3 | ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ಇತರೇ ವಿಷಯಗಳು |
| | ಎ. ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ನೇಮಕಾತಿ ಆದೇಶವನ್ನು ಪಡೆದ ಅಭ್ಯರ್ಥಿಗಳು ನಿಗದಿಪಡಿಸಿದ ದಿನಾಂಕದೊಳಗಾಗಿ ತಮ್ಮ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ, ಆಯ್ಕೆ ಸಮಿತಿಯ ಶಿಫಾರಸಿನಂತೆ ಸದರಿ ವಿಭಾಗಗಳಲ್ಲಿ ಕಾಯ್ದಿರಿಸಿದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡುವ ಕುರಿತು :<br><br>ಸಸ್ಯ ತಳಿ ಅಭಿವೃದ್ಧಿ ಶಾಸ್ತ್ರ ಮತ್ತು ಜೀವ ರಸಾಯನ ಶಾಸ್ತ್ರ ವಿಭಾಗಗಳಲ್ಲಿ, ಕ್ರಮವಾಗಿ, ಕುಮಾರಿ ಬಸಮ್ಮ ಹಾಗೂ ಶ್ರೀ ನಾಗನಗೌಡ ಇವರಿಗೆ ಸಹಾಯಕ ಪ್ರಾಧ್ಯಾಪಕರಾಗಿ ಆಯ್ಕೆ ಮಾಡಿದ, ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಮಂಡಳಿಯು ಅನುಮೋದಿಸಿದ ಮೇರೆಗೆ ನೇಮಕಾತಿ ಆದೇಶಗಳನ್ನು ನೀಡಲಾಗಿದೆಯೆಂದು ಅಧ್ಯಕ್ಷರು ಸಭೆಯ ಗಮನಕ್ಕೆ ತರುತ್ತಾ, ಸದರಿ ಅಭ್ಯರ್ಥಿಗಳ ಕೋರಿಕೆ ಮೇರೆಗೆ ಅವರು ತಮ್ಮ ಕರ್ತವ್ಯಕ್ಕೆ ಹಾಜರಾಗುವ ಅವಧಿಯನ್ನು ವಿಸ್ತರಿಸಲಾಗಿದ್ದು, ಅಂತಿಮವಾಗಿ, ಈ ಅಭ್ಯರ್ಥಿಗಳು 1-1-2018 ರೊಳಗಾಗಿ ಕರ್ತವ್ಯಕ್ಕೆ ಹಾಜರಾಗಲು ಗಡುವು ನಿಗದಿಪಡಿಸಲಾಗಿದೆಯೆಂದೂ ಮತ್ತು ಒಂದು ವೇಳೆ, ನೇಮಕಾತಿ ಆದೇಶಗಳನ್ನು ಪಡೆದ ಈ ಅಭ್ಯರ್ಥಿಗಳು 1–1–2018 ರಂದು ಅಥವಾ ಸದರಿ ದಿನಾಂಕದೊಳಗಾಗಿ ತಮ್ಮ ಕರ್ತವ್ಯಗಳಿಗೆ ಹಾಜರಾಗಲು ವಿಫಲರಾದಲ್ಲಿ, ಆಯ್ಕೆ ಸಮಿತಿಯು ಸದರಿ ವಿಭಾಗಗಳಲ್ಲಿ ಕಾಯ್ದಿರಿಸಿದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ನೀಡುವ ಕುರಿತು ಮಂಡಳಿಯ ಅನುಮೋದನೆ ಕೋರಿದರು.<br><br>ಠರಾವು:<br>ದಿನಾಂಕ 1–1–2018 ರಂದು ಅಥವಾ ಸದರಿ ದಿನಾಂಕದೊಳಗಾಗಿ ಸಸ್ಯ ತಳಿ ಅಭಿವೃದ್ಧಿ ಶಾಸ್ತ್ರ ಮತ್ತು ಜೀವ ರಸಾಯನ ಶಾಸ್ತ್ರ ವಿಭಾಗಗಳಲ್ಲಿ, ಕ್ರಮವಾಗಿ, ಸಹಾಯಕ ಪ್ರಾಧ್ಯಾಪಕರಾಗಿ ನೇಮಕಾತಿ ಆದೇಶಗಳನ್ನು ಪಡೆದ ಕುಮಾರಿ ಬಸಮ್ಮ ಹಾಗೂ ಶ್ರೀ ನಾಗನಗೌಡ ಇವರು ತಮ್ಮ ಕರ್ತವ್ಯಗಳಿಗೆ ಹಾಜರಾಗಲು ವಿಫಲರಾದಲ್ಲಿ, ಆಯ್ಕೆ ಸಮಿತಿಯು ಶಿಫಾರಸಿದಂತೆ ಸದರಿ ವಿಭಾಗಗಳಲ್ಲಿ ಕಾಯ್ದಿರಿಸಿದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ಕುಲಸಚಿವರು ನೀಡುವಂತೆ ಮಂಡಳಿಯು ಠರಾಯಿಸಿತು.<br><br>(ಕ್ರಮ: ಕುಲಸಚಿವರು) |

| | |
|---|---|
| | **ಬಿ. ರಿಟ್ ಪೆಟಿಶನ್ ಸಂಖ್ಯೆ 207640/2017 ರಲ್ಲಿ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠದ ದಿನಾಂಕ 15–12–2017 ರ ಆದೇಶದ ಅನುಪಾಲನೆ ಕುರಿತು:**<br><br>ಸದಸ್ಯ ಕಾರ್ಯದರ್ಶಿಯು ರಿಟ್ ಪೆಟಿಶನ್ ಸಂಖ್ಯೆ 207640/2017 ರಲ್ಲಿ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠದ ದಿನಾಂಕ 15–12–2017 ರ ಆದೇಶವನ್ನು ಸಭೆಯಲ್ಲಿ ಮಂಡಿಸುತ್ತಾ, ಅಭ್ಯರ್ಥಿಗಳ ಆಯ್ಕೆಯ ನಿಮಿತ್ತ ದಿನಾಂಕ 18–8–2017 ರಂದು ನಡೆದ ಸಂದರ್ಶನದ ಸಂದರ್ಭದಲ್ಲಿ ಮೇಲ್ನೋಟಕ್ಕೆ ಗೋಚರಿಸುವ ಕಾನೂನುಸಮ್ಮತವಲ್ಲದ ಲೋಪದೋಷಗಳು ಹಾಗೂ ಕ್ರಮಗಳ ಬಗ್ಗೆ ವಿಶ್ವವಿದ್ಯಾಲಯವು ತನಿಖೆಯನ್ನು ನಡೆಸಿ, ತನಿಖಾ ವರದಿಯನ್ನು ತನ್ನ ಆದೇಶದ ದಿನಾಂಕದಿಂದ 4 ವಾರಗಳ ಒಳಗಾಗಿ (ಅಂದರೆ, ದಿನಾಂಕ 12–1–2018 ರೊಳಗಾಗಿ) ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸುವ ಅಗತ್ಯತೆಯನ್ನು ಸಭೆಯ ಗಮನಕ್ಕೆ ತಂದರು.<br><br>**ಠರಾವು:**<br>ಡಾ. ಎಸ್.ಎ. ಪಾಟೀಲ, ವಿಶ್ರಾಂತ ಕುಲಪತಿಗಳು, ಕೃವಿವಿ ಧಾರವಾಡ–ಅಧ್ಯಕ್ಷರು, ಶ್ರೀ ಎ.ಎ. ಚಪ್ಪರಬಂದ್, ಉಪಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು–ಸದಸ್ಯರು ಹಾಗೂ ಶ್ರೀ ಆರ್.ಸಿ. ಠಾಕೂರ್, ನಿವೃತ್ತ ಸಹಾಯಕ ಕುಲಸಚಿವ, ಕೃವಿವಿ ಧಾರವಾಡ – ಸದಸ್ಯರು ಇವರನ್ನೊಳಗೊಂಡ ತನಿಖಾ ಸಮಿತಿಯನ್ನು ರಚಿಸುತ್ತಾ, ಸದರಿ ಸಮಿತಿಯು ಸಹಾಯಕ ಪ್ರಾಧ್ಯಾಪಕ (ಕೃಷಿ ಮೈಕ್ರೋಬಯಾಲಜಿ / ಆಹಾರ ಮೈಕ್ರೋಬಯಾಲಜಿ) ಹುದ್ದೆಯ ನೇಮಕಾತಿ ಸಂಬಂಧ ದಿನಾಂಕ 18–8–2017 ರಂದು ನಡೆದ ಅಭ್ಯರ್ಥಿಗಳ ಸಂದರ್ಶನದ ಸಂದರ್ಭದಲ್ಲಿ ಮೇಲ್ನೋಟಕ್ಕೆ ಗೋಚರಿಸುವ, ಕಾನೂನುಸಮ್ಮತವಲ್ಲದ ಲೋಪದೋಷಗಳು ಹಾಗೂ ಕ್ರಮಗಳ ಬಗ್ಗೆ ತನಿಖೆಯನ್ನು ನಡೆಸಿ, ತನಿಖಾ ವರದಿಯನ್ನು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ದಿನಾಂಕದಿಂದ 4 ವಾರಗಳ ಒಳಗಾಗಿ (ಅಂದರೆ, ದಿನಾಂಕ 12–1–2018 ರೊಳಗಾಗಿ) ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸುವಂತೆ ಠರಾಯಿಸಲಾಯಿತು.<br><br>(ಕ್ರಮ: ಕುಲಸಚಿವರು)<br><br>**ಸಿ. ನಾಮನಿರ್ದೇಶಿತ ಸದಸ್ಯರುಗಳಿಗೆ ನೀಡುವ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನ ಹೆಚ್ಚಿಸುವ ಕುರಿತು:**<br><br>ಉಪಸ್ಥಿತರಿದ್ದ ನಾಮನಿರ್ದೇಶಿತ ಸದಸ್ಯರು ತಮಗೆ ನೀಡಲಾಗುತ್ತಿರುವ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ದರಗಳು ಅತ್ಯಲ್ಪವಾಗಿರುವುದನ್ನು ಅಧ್ಯಕ್ಷರು ಹಾಗೂ ಕೃಷಿ ಇಲಾಖೆಯ ಕಾರ್ಯದರ್ಶಿಯವರ ಗಮನಕ್ಕೆ ತಂದು, ಈ ಭತ್ಯೆಗಳನ್ನು ಯುಕ್ತವಾಗಿ ಹೆಚ್ಚಿಸುವ ಅವಶ್ಯಕತೆಯನ್ನು ಪ್ರಸ್ತಾಪಿಸಿದರು.<br><br>ಕೃಷಿ ಇಲಾಖೆ ಕಾರ್ಯದರ್ಶಿಯವರು ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆ ದರಗಳನ್ನು ಸೂಕ್ತವಾಗಿ ಹೆಚ್ಚಿಸುವ ಕುರಿತು ಕೂಡಲೇ ಪರಿಶೀಲಿಸುವುದಾಗಿ ಮಾನ್ಯ ನಾಮನಿರ್ದೇಶಿತ ಸದಸ್ಯರಿಗೆ ಭರವಸೆ ನೀಡಿದರು.<br><br>ಕ್ರಮ : ಸರಕಾರದ ಕಾರ್ಯದರ್ಶಿಯವರು (ಕೃಷಿ ಇಲಾಖೆ) |

ಮಾನ್ಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ/– 26–12–2017 | ಸಹಿ/– 26–12–2017 |
|---|---|
| (ಪಿ.ಎಂ. ಸಾಲಿಮಠ)<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | (ಗುತ್ತಿ ಜಂಬುನಾಥ)<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

(ಗುತ್ತಿ ಜಂಬುನಾಥ)
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.